
ಶ್ರೀ ವಿಜಯದಾಸಾರ್ಯ

ವಿರಚಿತ

ಮಧ್ಯಾರ್ಜುನಮಹಿಮೆ ಸುಳಾದಿ

ಕಾವೇರಿನದಿಯ ದಕ್ಷಿಣ ತೀರದಲ್ಲಿರುವ ಕ್ಷೇತ್ರ



ಸಂಪಾದಕ : ಅರವಿಂದಲೋಚನ

ಶ್ರೀ ವಿಜಯದಾಸಾರ್ಯ

ವಿರಚಿತ

ಮಧ್ಯಾರ್ಜುನಮಹಿಮೆ

ಸುಳಾದಿ

(ಕಾವೇರಿಯ ದಕ್ಷಿಣ ತೀರದಲ್ಲಿರುವ ಕ್ಷೇತ್ರ)

ಸಂಪಾದಕ : ಅರವಿಂದಲೋಚನ

ಗತಶಾಲಿವಾಹನಶಕ ೧೯೪೨ ಚಾಂದ್ರಮಾನ

ಶಾರ್ವರೀನಾಮ ಸಂವತ್ಸರದ ಹೇಮಂತ ಋತುವಿನ

ಮಾರ್ಗಶೀರ್ಷ ಮಾಸದ

ಕೃಷ್ಣ ಪಕ್ಷದ ತೃತೀಯಾ ತಿಥಿಯಂದು ಈ ಗ್ರಂಥವು ಪ್ರಕಟ

ಮಧ್ವಾರ್ಜುನಮಹಿಮೆ ಸುಳಾದಿ

ರಾಗ : ಕೀರವಾಣಿ

ಧ್ರುವತಾಳ

ಏನು ಪೇಳಲಿ ಮಧ್ವಾರ್ಜುನದ ಮಹಾಮಹಿಮೆ

ಏಣಿ ಸಾಲಲಳವೇನು ಜ್ಞಾನಿಗಳಿಗೆ

ಕ್ಷೋಣಿಯೊಳಗೆ ಪುಟ್ಟಿ ಅನಂತಾಜನುವಾದಲ್ಲಿ

ಮಾಣಾದೆ ಮಾಡಿದಾ ದುರಿತಾವೆಂಬೊ

ಮಾಣಾದೆ ಮಾಡಿದಾ ದುರಿತಾವೆಂಬೊ

ಕಾನನಾ ರಾಸಿಗೆ ಹವ್ಯವಾಹನನಾಗಿ

ತಾನಿಗಾಲಿಪ್ಪಾದು ತವಕದಿಂದ

ಗೇಣಿಗೇಣಿಗೆ ನಿಂದು ಯಾತ್ರಿಯಾ ಪತಿಕರಿಸಿ

ಆನಂದಾವಾಗುವದು ಅನುಗಾಲವೊ

ಭಾನುಕೋಟಿತೇಜಾ ವಿಜಯವಿಠಲನ್ನ

ನೀನೆಂದು ನಿತ್ಯ ಸ್ತುತಿಸೆ ಸಾನುಕೂಲಾವೆನ್ನಿ ll1ll

ಮಟ್ಟತಾಳ

ಕಶ್ಯಪ ವಿಭಾಂಡ ಋಷಿಗಳೀರ್ವಾರು

ಹೃಷಿಕೇಶನ ಒಲಿಸುವೆವು ಎನುತಲಿ

ಕುಶಲಮತಿಯಲ್ಲಿ ವಸುಧಿಯೊಳಗೆ ಯಮನಾ

ದೆಶೆಯಲ್ಲಿಗೆ ಬಂದು ತೃಷಿಯಾದಿಯ ತೊರೆದು

ಹಸನಾಗಿ ಇರುತಿರೆ

ವಸುದೇವ ತನಯಾ ವಿಜಯವಿಠಲರೇಯ

ಶಿಶುವಿನಲಾಟಾರ್ಚಿಸಿ ನೋಡುವೆವೆಂದು ll2ll

ತ್ರಿವಿಡಿತಾಳ

ಈ ಪರಿ ತಪಸನು ಮಾಡಾಲು ಈರ್ವರಿಗೆ

ಗೋಪಾಲಕೃಷ್ಣನು ಅರ್ಜುನ ಮರದೆಡಿಯಾ

ತಾ ಪ್ರೇಮದಿಂದಲಿ ಮುನಿಗಳಿಗೆ ತನ್ನಯಾ

ರೂಪವನ್ನು ತೋರಿ ರಚನೆಯಿಂದ

ತಪಸಿಗಾಮನೊ ಬಯಕಿಯ ಸಲ್ಲಿಸಿ

ದ್ರೌಪದಿವರದನು ಮರದಾ ಮಧ್ಯ

ರೂಪವಡಗಿಸಿಕೊಂಡು ಪೋದಾನಂದಿನಾರಭ್ಯ

ಭೂಪಾರದೊಳಗೆ ಮಧ್ಯಾರ್ಜುನನೆಂಬಾ

ತಾ ಪೆಸರಾಗಿ ಈ ಕ್ಷೇತ್ರ ಪೆಸರಾಗಿ ಈ ಕ್ಷೇತ್ರ

ಗುರುತಾದರೂ

ನಾ ಪೇಳಾಲಿಂನ್ನಿನು ವಿಚಿತ್ರಾ ಉ-

ಮಾಪತಿ ವಿಜಯವಿಠಲರೇಯ ಅನಂತ

ರೂಪಾನಗಣಿತ ಮಹಿಮಾ ಮೆರೆದಾನಿಲ್ಲಿ ll3ll

ಅಟ್ಟತಾಳ

ಕಾರುಣ್ಯಾಮೃತಾತೀರ್ಥ ಪಾರಮಾರ್ಥದ

ಕಾವೇರಿಯಾ ಸ್ನಾನವು ಶ್ರೀರಂಗನಾಥನಾ

ಶ್ರೀಪಾದ ಪದುಮವ ಚಾರುಮನದಲ್ಲಿ

ಸ್ಮರಿಸುತ್ತ ಮಾಡಲು ಮೀರಿದ ದುರಿತವ
ವಾರಿಧಿ ಬತ್ತಿ ಸಂ-
ಸಾರದಿಂದಲಿ ಉದ್ಧಾರವಾಗುವುದು
ವಾರುಣೀಂದ್ರವಂದ್ಯ ವಿಜಯವಿಠಲ ತಾನೆ
ಭಾರಕರ್ತನಾಗಿ ಸಾರೆದಲಿಪ್ಪಾ ll4ll

ಆದಿತಾಳ

ಎಲ್ಲಿ ಪೋಗದಿದ್ದ ಪಾಪ
ಇಲ್ಲಿ ಬಿಟ್ಟು ಪೋಪುದು
ಎಳ್ಳನಿತು ಯಾತ್ರಿ ಬಿಡದೆ
ಉಳ್ಳದ್ದು ಮಾಡಿ ಇದ್ದಲೀ ವೇಗಾದಲ್ಲಿ
ಸಲ್ಲಾದ ಸಂಶಯ ಹರಿಯ
ಬಲ್ಲವರಿಗೆ ಇದರ
ಸೊಲ್ಲು ಒಂದು ಕೇಳಾಲು ಕೈ-
ವಲ್ಯಾವಾಗುವದು ಸಿದ್ಧಾ

ಬಲ್ಲಿದ ಶ್ರೀ ವಿಜಯವಿ-

ಠಲನ ಕರುಣದಿಂದ

ಚುಲ್ಲಿಕ ನಡತಿ ಪೋಗಿ

ಒಳ್ಳೆ ಫಲ ದೊರಕುವದೂ ll5ll

ಜತೆ

ಮಧ್ಯಾರ್ಜುನದ ಯಾತ್ರಿ ಮಾಡಾಲು ಮನವರಿತು

ಬಿದ್ದು ಹೋಹದು ಫಲಾ ನೀವ ವಿಜಯವಿಠಲ ll6ll

||ಶ್ರೀ ಕೃಷ್ಣಾರ್ಪಣಮಸ್ತು||

||ಶ್ರೀ ಮಧ್ವೇಶಾರ್ಪಣಮಸ್ತು||